Shikshan Sanshodhan : Journal of Arts, Humanities and Social Sciences ISSN: 2581-6241 Volume - 3, Issue - 6, Nov-Dec – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 25/11/2020 Accepted on : 08/12/2020 Publication Date: 30/12/2020

# ಪ್ರಾಚೀನ ಪುನ್ನಾಟ ರಾಜ್ಯ ಮತ್ತು ಸಮಕಾಲೀನ ರಾಜಮನೆತನಗಳೊಂದಿಗೆ ಹೊಂದಿದ್ದ ಸಂಬಂಧಗಳು

**ಸಿದ್ದಯ್ಯ ನಿರ್ಮಲ್ ರಾಜು,**
ಸಂಶೋಧನಾ ವಿದ್ಯಾರ್ಥಿ, ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 574199
Email - siddumoury@gmail.com

***Abstract:*** ಪುನ್ನಾಟ ರಾಜ್ಯವು ಪ್ರಾಚೀನ ಕರ್ನಾಟಕ ದಕ್ಷಿಣ ಭಾಗದಲ್ಲಿದ್ದ ಒಂದು ಪ್ರಮುಖ ಆಯಕಟ್ಟಿನ ಭೌಗೋಳಿಕ ಘಟಕ ಪ್ರದೇಶ ಮತ್ತು ಆಡಳಿತಾತ್ಮಕವಾಗಿತ್ತು. 6ನೆಯ ಶತಮಾನದ ಮಾಂಬಳ್ಳಿ ಶಾಸನದ ಪ್ರಕಾರ ಇದು ಕಾವೇರಿ–ಕಬಿನಿ ನದಿಗಳ ಜಲಾನಯನ ಪ್ರದೇಶವಾಗಿತ್ತು. ಈಗಿನ ಮೈಸೂರು ಜಿಲ್ಲೆಗೆ ಸೇರಿದ ಕಿತ್ಥಿಪುರ ಅಥವಾ ಕೀರ್ತಿಪುರವು ಈ ರಾಜ್ಯದ ಮುಖ್ಯ ಪಟ್ಟಣ ಮತ್ತು ರಾಜಧಾನಿಯಾಗಿತ್ತು. ಪುನ್ನಾಟವು ಇಂದಿನ ಮೈಸೂರು ಜಿಲ್ಲೆಯಲ್ಲದೆ ಸುತ್ತಣ ಪ್ರದೇಶಗಳಾದ ಕೊಡಗು ಜಿಲೆಯ ಬಹುಭಾಗಗಳನ್ನು ಹಾಗೂ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಸಹ ಒಳಗೊಂಡಿತ್ತೆಂದು ತಿಳಿದು ಬರುತ್ತದೆ. ಪುನ್ನಾಟ ರಾಜ್ಯದ ಇತಿಹಾಸವನ್ನು ಅಧ್ಯಯನ ಮಾಡುವಾಗ ನಮಗೆ ಎರಡೂ ರಾಜಮನೆತನಗಳ ಜೊತೆ ಸಂಬಂಧಗಳಿರುವುದು ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಪುನ್ನಾಟ ರಾಜ್ಯದ ಅರಸರು ಸಮಕಾಲೀನ ಕದಂಬರು ಮತ್ತು ಗಂಗರೊಡನೆ ಹೊಂದಿದ್ದ ವೈವಾಹಿಕ ಸಂಬಂಧ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಚಾರಿತ್ರಿಕ ಭೊಗೋಳದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

***Key Words:*** ಪುನ್ನಾಟ, ಕೀರ್ತಿಪುರ, ಕದಂಬರು, ಗಂಗರು

## INTRODUCTION:

ಪ್ರಾಚೀನ ಪುನ್ನಾಟ ರಾಜ್ಯವು ಸಮಕಾಲೀನ ಪ್ರಮುಖ ರಾಜಮನೆತನಗಳಾದ ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರೊಂದಿಗೆ ಹೊಂದಿದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಚಾರಿತ್ರಿಕ ಭೂಗೋಳದ ಅಧ್ಯಯನದ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಪುನ್ನಾಟ ರಾಜ್ಯವು ಪ್ರಾಚೀನ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದ ಒಂದು ಪ್ರಮುಖ ಆಯಕಟ್ಟಿನ ಭೌಗೋಳಿಕ ಘಟಕ ಪ್ರದೇಶ ಮತ್ತು ಆಡಳಿತಾತ್ಮಕವಾಗಿತ್ತು. 6ನೆಯ ಶತಮಾನದ ಮಾಂಬಳ್ಳಿ ಶಾಸನದ ಪ್ರಕಾರ ಇದು ಕಾವೇರಿ–ಕಬಿನಿ ನದಿಗಳ ಜಲಾನಯನ ಪ್ರದೇಶವಾಗಿತ್ತು.[1] ಈಗಿನ ಮೈಸೂರು ಜಿಲ್ಲೆಗೆ ಸೇರಿದ ಕಿತ್ಥಿಪುರ ಅಥವಾ ಕೀರ್ತಿಪುರವು ಈ ರಾಜ್ಯದ ಮುಖ್ಯ ಪಟ್ಟಣ ಮತ್ತು ರಾಜಧಾನಿಯಾಗಿತ್ತು. ಪುನ್ನಾಟವು ಇಂದಿನ ಮೈಸೂರು ಜಿಲ್ಲೆಯಲ್ಲದೆ ಸುತ್ತಣ ಪ್ರದೇಶಗಳಾದ ಕೊಡಗು ಜಿಲ್ಲೆಯ ಬಹುಭಾಗಗಳನ್ನು ಹಾಗೂ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಸಹ ಒಳಗೊಂಡಿತ್ತೆಂದು ತಿಳಿದು ಬರುತ್ತದೆ.[2] ಒಬ್ಬ ವಿದ್ವಾಂಸರ ಪ್ರಕಾರ ಪನ್ನಾಟವು ನದಿ ಝರಿಗಳು ಹರಿಯುವ ಪ್ರದೇಶ ಎಂದು ಸೂಚಿಸುವ ಪುನಾಲ್ ಮತ್ತು ನಾಡು ಎಂಬ ಕನ್ನಡ ಪದಗಳ ಸಂಯುಕ್ತ ರೂಪವಾಗಿದೆ. ಪುನ್ನಾಟವನ್ನು ಪುಂರಾಷ್ಟ್ರವೆಂದು ಒಂದು ಶಾಸನದಲ್ಲಿ ಕರೆದಿದ್ದರೆ,[3] ಪೂನ್ನಾಡು, ಮುದಲ್ನಾಡು ಎಂಬ ರೂಪಗಳೂ ಸಹ ದೊರಕುತ್ತವೆ.[4] ಪದಿನಾಡು ಎಂಬುದೂ ಸಹ ಪುನ್ನಾಡಿನ ರೂಪಾಂತರ ಇರಬಹುದೇ ಎಂಬ ಅಭಿಪ್ರಾಯಕ್ಕೆ ವಿದ್ವಾಂಸರ ಒಮ್ಮತವು ಕಂಡುಬರುವುದಿಲ್ಲ.

ಲಿಖಿತ ದಾಖಲೆಗಳ ಪ್ರಕಾರ ಪುನ್ನಾಟ ದೇಶಕ್ಕೆ ಸಂಬಂಧಿಸಿದಂತೆ ಬಹು ಪ್ರಾಚೀನವಾದ ಉಲ್ಲೇಖಗಳು ಕೂಡ ದೊರಕುತ್ತವೆ. ಈಜಿಪ್ಟಿನ 18ನೆಯ ರಾಜವಂಶದ ಅರಸರುಗಳ ಪ್ರ.ಶ.ಪೂ. 15–14ನೇಯ ಶತಮಾನದ ದಾಖಲೆಗಳಲ್ಲಿ ದೊರಕುವ ಪುಂಟ್ ಪುನ್ನಾಟ ಇರಬಹುದೆಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಕೆಲವು ಪುರಾತತ್ವಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜೈನ ಸಾಹಿತ್ಯದ ಪ್ರಕಾರ ಮಗದ ರಾಜ್ಯದಿಂದ ಜೈನ ಸಂಘವೊಂದು ಜೈನಮುನಿ ಭದ್ರಬಾಹುವಿನ ಮುಂದಾಳತ್ವದಲ್ಲಿ ದಕ್ಷಿಣ ಭಾರತಕ್ಕೆ ವಲಸೆ ಬಂದುದಾಗಿಯೂ ಶ್ರವಣಬೆಳಗೊಳಕ್ಕೆ ಬಂದಾಗ ತನ್ನ ಅಂತ್ಯ ಸಮೀಪಿಸಿದುದನ್ನು ಅರಿತ ಭದ್ರಬಾಹು ಅಲ್ಲೇ ಉಳಿದುಕೊಂಡನೆಂದೂ ತಿಳಿದು ಬರುತ್ತದೆ.[5] ಹರಿಷೇಣನ ಬೃಹತ್ ಕಥಾಕೋಶದಲ್ಲಿ (ಕ್ರಿ.ಶ.931) ಭದ್ರಬಾಹುವಿನ ಮಾತಿನಂತೆ ಜೈನಸಂಘ ದಕ್ಷಿಣದಲ್ಲಿದ್ದ ಪುನ್ನಾಟ ವಿಷಯಕ್ಕೆ ಹೋಯಿತು ಎಂದು ಹೇಳಿದೆ. ಇದರಂತೆ ಪುನ್ನಾಟ ರಾಜ್ಯ ಪ್ರ.ಶ.ಪೂ. 3ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದಿರಬಹುದು. ಪ್ರಸಕ್ತ ಶಕಾರಂಭದಲ್ಲಿ ರೋಮ್ ಚಕ್ರಾಧಿಪತ್ಯಕ್ಕೂ ಈ ರಾಜ್ಯಕ್ಕೂ ವ್ಯಾಪಾರ ಸಂಬಂಧ ಬೆಳೆದು ಬಂದಿದ್ದಿರಬೇಕು. ಪ್ಲಿನಿ ಭಾರತದ ಪಚ್ಚೆಯ ಹರಳುಗಳ ಮೇಲೆ ರೋಮನ್ ಕುಶಲಕಲೆಗಾರರು ಕೆತ್ತನೆ ಮಾಡಿರುವ ವಿಷಯ ತಿಳಿಸಿದ್ದಾನೆ. ಸುಮಾರು 2ನೆ ಶತಮಾನದ "ಟಾಲೆಮಿ" ಎಂಬ ಭೂಗೋಳಕಾರ ಪುನ್ನಾಟ ಪಚ್ಚೆಕಲ್ಲುಗಳಿಗೆ ಪ್ರಸಿದ್ಧವಾಗಿತ್ತೆಂದು ಹೇಳಿದ್ದಾನೆ. ಕೊಯಮತ್ತೂರು ಜಿಲ್ಲೆಯ ಭಾಗಗಳಲ್ಲಿ ಪಚ್ಚೆಯ ಕಲ್ಲು ಇತ್ತೀಚಿನವರೆಗೆ ದೊರೆಯುತ್ತಿದ್ದುದು ಮತ್ತು ಆ ಭಾಗದಲ್ಲಿ ಅನೇಕ ರೋಮನ್ ನಾಣ್ಯಗಳು ದೊರೆತಿರುವುದೂ ರೋಮನ್ ವ್ಯಾಪಾರಿಗಳು ಇಲ್ಲಿಂದ ಪಚ್ಚೆಯ ಕಲ್ಲುಗಳನ್ನು ಸಾಗಿಸುತ್ತಿದ್ದರೆಂಬುದಕ್ಕೆ ಪುಷ್ಟಿ ಕೊಡುತ್ತವೆ.

5 ರಿಂದ 7ನೆಯ ಶತಮಾನದವರೆಗೆ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಪುನ್ನಾಟ ವಂಶದವರ ಮೂರು ಶಾಸನಗಳು ಇದುವರೆವಿಗೆ ದೊರೆತಿವೆ. ಕೊಮರಲಿಂಗಂ ತಾಮ್ರಶಾಸನದಲ್ಲಿ ಪುನ್ನಾಟ ರಾಜ ರವಿದತ್ತ ರಾಜಧಾನಿ ಕಿತ್ಥಿಪುರದಲ್ಲಿದ್ದು ದಾನಮಾಡಿದುದಾಗಿ ತಿಳಿಸುವುದರಿಂದ ಕೀರ್ತಿಪುರ ಇವರ ರಾಜಧಾನಿಯಾಗಿತ್ತೆಂಬುದು ಸ್ಪಷ್ಟ. ಕಬಿನಿ ನದಿಯ ದಡದಲ್ಲಿರುವ ಈಗಿನ ಕಿತ್ತೂರು ಹಿಂದಿನ ಕೀರ್ತಿಪುರವಾಗಿತ್ತೆಂದು ಅಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ. ಈ ವಂಶದ ಮೂಲಪುರುಷ ತಾಮ್ರಕಾಶ್ಯಪ(ಇವನು ಮಿಕನೆಂಬುವನ ಮಗನೆಂದು ಒಂದು ಶಾಸನ

ತಿಳಿಸುತ್ತದೆ). ಈ ತಾಮ್ರಕಾಶ್ಯಪನ ಮಗ ರಾಜಾದಿತ್ಯ ಇವನ ವಂಶದಲ್ಲಿ ಮುಂದೆ ಕಾಣಿಸಿಕೊಳ್ಳುವವನು ವಿಷ್ಣುದಾಸ ಈ ವಿಷ್ಣುದಾಸನ ಮಗ ರಾಷ್ಟ್ರವರ್ಮ (ಸು.475) ಕದಂಬ ವಂಶದ ಪ್ರಭಾವತಿ ಎಂಬುವಳನ್ನು ಮದುವೆಯಾಗಿದ್ದ. ಈತನಿಗೆ ಮೂವರು ಮಕ್ಕಳು –ಮಾಂಬಳ್ಳಿ ಶಾಸನವನ್ನು ಹಾಕಿಸಿದ ಪೃಥ್ವಿಪತಿ(ಸು.520), ಸ್ಕಂದವರ್ಮ(ಸು.530). ಕೊಮರಲಿಂಗಂ ಶಾಸನದಲ್ಲಿ ಈ ವಂಶಾವಳಿ ಹೀಗೆ ಮುಂದುವರೆದಿದೆ ನಾಗದತ್ತ(ಸು.530) ಗಂಗ ಅವನೀತ ಮತ್ತು ದುರ್ವಿನೀತರ ಶಾಸನಗಳು ಅವನೀತ ಪುನ್ನಾಟ ರಾಜ ಸ್ಕಂದವರ್ಮನ ಮಗ ಶಾಸನ ಕರ್ತೃವಾದ ಪುನ್ನಾಟ ರಾಜ ರವಿದತ್ತ(ಸು.650) ಈ ಶಾಸನಗಳಿಂದ ಇವರ ಕಾಲ ಸ್ಪಷ್ಟವಾಗುವುದಿಲ್ಲ. ಆದರೆ ಗಂಗ ಅವನೀತನ ಸಮಕಾಲೀನರಾಗಿ ಸ್ಕಂದವರ್ಮನಿದ್ದನೆಂದು ತಿಳಿಯುವುದರಿಂದ ಆದರ ಆಧಾರದ ಮೇಲೆ ಪುನ್ನಾಟ ರಾಜರ ಕಾಲವನ್ನು ಸ್ಥೂಲವಾಗಿ ಊಹಿಸಬಹುದು. ದುರ್ವಿನೀತನ ಶಾಸನಗಳಲ್ಲಿ ಅವನನ್ನು ಪೌನ್ನಟಾಧಿಪತಿ ಎಂದಿರುವುದರಿಂದ ಅವನ ಕಾಲದಲ್ಲಿ ಈ ಪುನ್ನಾಟ ರಾಜ್ಯ ಮೊದಲು 6000 ವಿಷಯವಾಗಿತ್ತೆಂದು ತಿಳಿದುಬರುತ್ತದೆ. ಮುಂದೆ ಅದು ಪುನ್ನಾಟ 10000 ರಾಜ್ಯವಾಗಿದ್ದುದಾಗಿ ಹಲವು ಶಾಸನಗಳಲ್ಲಿ ಕಂಡುಬರುತ್ತದೆ. ಪುನ್ನಾಟದ ಅರಸರು ಸಮಕಾಲೀನ ರಾಜನೆತನಗಳೊಂದಿಗೆ ಹೊಂದಿದ್ದ ಸಂಬಂಧವನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದು. ಮೊದಲನೆಯದಾಗಿ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದರ ಮೂಲಕ ಶಾಂತಿಯುತವಾದ ಸಂಬಂಧವನ್ನು ಹೊಂದಿರುವಂತಹದ್ದು, ಎರಡನೆಯದಾಗಿ ಯುದ್ಧಕಾಲದ ಸಂಬಂಧಗಳು ಅಥವಾ ಸಂಘರ್ಷಣೆಯ ಸಂಬಂದವೆನ್ನಬಹುದು.

ಪುನ್ನಾಟ ರಾಜ್ಯದ ಇತಿಹಾಸವನ್ನು ಅಧ್ಯಯನ ಮಾಡುವಾಗ ನಮಗೆ ಎರಡೂ ರಾಜಮನೆತನಗಳ ಜೊತೆ ಸಂಬಂಧಗಳಿರುವುದು ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಪುನ್ನಾಟ ರಾಜ್ಯದ ಅರಸರು ಸಮಕಾಲೀನ ಕದಂಬರು ಮತ್ತು ಗಂಗರೊಡನೆ ಹೊಂದಿದ್ದ ವೈವಾಹಿಕ ಸಂಬಂಧ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಕುರಿತು ಮುಂದೆ ಚರ್ಚಿಸಲಾಗಿದೆ.

ಕದಂಬರು ಕ್ರಿ.ಶ. ಸುಮಾರು 340 ರಿಂದ 580ರ ವರೆಗೂ ರಾಜ್ಯವಾಳಿದರು. ಬನವಾಸಿ ಕದಂಬರ ರಾಜಧಾನಿಯಾಗಿತ್ತು. ಕದಂಬ ವಂಶದ ರಾಜರು ತಮ್ಮ ದೀರ್ಘ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಆಳಿದ ವಿವಿಧ ರಾಜಮನೆತನಗಳಾದ ಪಲ್ಲವ, ತ್ರಿಕೂಟ, ಅಭೀರ, ಪಾರಿಯಾತ್ರ, ಶಕಸ್ಥಾನ, ಸೇಂದ್ರಕರು, ಪುನ್ನಾಟ ರಾಜ್ಯ ಮುಂತಾದವರೊಡನೆ ರಾಜಕೀಯ ಮತ್ತು ವೈವಾಹಿಕ ಸಂಬಂಧಗಳನ್ನು ಹೊಂದಿದ್ದರು.[6]

ಕದಂಬ ರಾಜ್ಯ ಸ್ಥಾಪಕನಾದ ಮಯೂರವರ್ಮನು ತನ್ನ ಸುತ್ತಮುತ್ತಲಿನ ಆನೇಕ ರಾಜ್ಯಗಳೊಂದಿಗೆ ಪುನ್ನಾಟ ರಾಜ್ಯವನ್ನು ಸಹ ಸೋಲಿಸಿದನೆಂದು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಶಾಸನವು ತಿಳಿಸುತ್ತದೆ. ಮಯೂರವರ್ಮನು ಮರಣ ಹೊಂದಿದ ನಂತರ ಕಾಕುಸ್ಥವರ್ಮನು ರಾಜನಾದನು. ಕಾಕುಸ್ಥವರ್ಮನು ಬನವಾಸಿಯ ಕದಂಬ ರಾಜರಲ್ಲಿ ಅತ್ಯಂತ ಪ್ರಖ್ಯಾತ ರಾಜನಾಗಿದ್ದನು. ಕಾಕುಸ್ಥವರ್ಮನ ಕೀರ್ತಿ ವಿಶೇಷವಾಗಿ ವ್ಯಾಪಿಸಿ ಭಾರತದ ವಿವಿಧ ಪ್ರದೇಶಗಳಲ್ಲಿ ಆಳುತ್ತಿದ್ದ ರಾಜಸಂತತಿಗಳು ಕದಂಬ ಮನೆತನದೊಡನೆ ವೈವಾಹಿಕ ಬಾಂಧವ್ಯಗಳನ್ನು ಏರ್ಪಡಿಸಿಕೊಂಡಿದ್ದರೆಂಬುದಾಗಿ ತಿಳಿದು ಬರುತ್ತದೆ. ಗುಪ್ತ, ವಾಕಟಕರಿಗೆ ಕದಂಬ ಸಖ್ಯವಿತ್ತೆಂದು "ಕುಂತಲೇಶ್ವರದೌತ್ಯ" ದಿಂದ ತಿಳಿದು ಬರುತ್ತದೆ. ಕಾಕುಸ್ಥವರ್ಮನ ಮಗಳಾದ ಲಕ್ಷ್ಮೀ ಎಂಬುವಳು ಪಶ್ಚಿಮ ತೀರದಲ್ಲಿ ಆಳುತ್ತಿದ್ದ ಅಳುಪರಾಜನನ್ನು ವಿವಾಹವಾಗಿದ್ದಳು. ಮತ್ತೊಬ್ಬ ಮಗಳು ತಲಕಾಡು ಗಂಗರಾಜ ಮಾಧವನ ರಾಣಿಯಾಗಿದ್ದಳು. ಮಾಂಬಳ್ಳಿ ಶಾಸನದ ಪ್ರಕಾರ ವಿಷ್ಣುದಾಸನ ಮಗ ರಾಷ್ಟ್ರವರ್ಮ(ಕ್ರಿ.ಶ.430–455)ನಿಗೆ ಕದಂಬ ದೊರೆ ಕಾಕುಸ್ಥವರ್ಮನ ಮಗಳಾದ ಪ್ರಭಾವತಿಯನ್ನು ವಿವಾಹ ಮಾಡಿಕೊಡಲಾಗಿತ್ತು ಎಂದು ತಿಳಿದು ಬರುತ್ತದೆ. ಅವರಿಗೆ ಪೃಥ್ವಿಪತಿ (ಕ್ರಿ.ಶ.455–470), ಸ್ಕಂದವರ್ಮ (ಕ್ರಿ.ಶ.470–485) ಹಾಗೂ ನಾಗದತ್ತ ಎಂಬ ಮೂವರು ಮಕ್ಕಳಿದ್ದರು. ಪುನ್ನಾಟ ಅರಸ ಒಂದನೇ ಸ್ಕಂದವರ್ಮನಿಗೆ ಕದಂಬ ದೊರೆ ಸಿಂಹವರ್ಮನ ಮಗಳನ್ನು ವಿವಾಹಮಾಡಿಕೊಡಲಾಗಿತ್ತು. ಹೀಗೆ ಪುನ್ನಾಟ ಅರಸರಿಗೂ ಮತ್ತು ಕದಂಬರಿಗೂ ಆರಂಭದಲ್ಲಿ ರಾಜಕೀಯ ಘರ್ಷಣೆಯಿದ್ದರೂ ಕ್ರಮೇಣ ವೈವಾಹಿಕ ಸಂಬಂಧವಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ.

ಪುನ್ನಾಟ ಹಾಗೂ ಕದಂಬರ ಸೌಹಾರ್ದಯುತ ಸಂಬಂಧದಂತೆ ಪುನ್ನಾಟ ರಾಜ್ಯ ಮತ್ತು ತಲಕಾಡಿನ ಗಂಗರ ನಡುವೆ ರಾಜತಾಂತ್ರಿಕ ಹಾಗೂ ವೈವಾಹಿಕ ಸಂಬಂಧಗಳು ಇದ್ದವೆಂಬುದು ಅಧಿಕೃತ ದಾಖಲೆಗಳಿಂದ ತಿಳಿದುಬರುತ್ತದೆ. ತಲಕಾಡಿನ ಗಂಗ ಮನೆತನದ ಪ್ರಭುಗಳು ಸುಮಾರು ಎಂಟು ಶತಮಾನಗಳ ಕಾಲ ಕನ್ನಡ ನಾಡಿನ ದಕ್ಷಿಣ ಭಾಗವನ್ನು ಆಳಿದರು. ಗಂಗ ಸಂತತಿಯನ್ನು ಇತಿಹಾಸದಲ್ಲಿ ಪಶ್ಚಿಮ ಗಂಗರೆಂದು ಕರೆಯಲಾಗಿದೆ. ಗಂಗರು ಆಳುತ್ತಿದ್ದ ರಾಜ್ಯವನ್ನು ಗಂಗವಾಡಿ ತೊಂಬತ್ತಾರು ಸಾವಿರ ಎಂಬುದಾಗಿ ಕರೆಯಲಾಗಿತ್ತು. ಈ ಮನೆತನದ ಆಳ್ವಿಕೆಯ ಕಾಲದ ಶಾಸನಗಳು ಕೊಡಗು ಜಿಲ್ಲೆಯಿಂದ ಸೇಲಂ, ಕೊಯಮತ್ತೂರು ಜಿಲ್ಲೆಯವರೆಗೂ ಅಲ್ಲಲ್ಲಿ ದೊರೆತ್ತಿವೆ. ಗಂಗ ವಂಶದ ರಾಜರು ತಮ್ಮ ದೀರ್ಘ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳಾದ ಕಂಚಿಯ ಪಲ್ಲವರು, ಬನವಾಸಿಯ ಕದಂಬರು, ಪುನ್ನಾಟದ ಅರಸರು, ಬಾದಾಮಿ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಮಧುರೆಯ ಪಾಂಡ್ಯರೊಡನೆ ರಾಜತಾಂತ್ರಿಕ ಹಾಗೂ ವೈವಾಹಿಕ ಸಂಬಂಧವನ್ನು ಹೊಂದಿದ್ದರು.

ಅವಿನೀತನು ಗಂಗ ರಾಜರಲ್ಲಿ ಪ್ರಖ್ಯಾತನಾದ ರಾಜನಾಗಿದ್ದನು. ಮಾಧವನ ತರುವಾಯ ಇವನು ಅಧಿಕಾರಕ್ಕೆ ಬಂದು ಕ್ರಿ.ಶ.466 ರಿಂದ 495 ರವರೆಗೆ ಆಳಿದನು. ಪ್ರಾಚೀನ ಪುನ್ನಾಟ ನಾಡಿನ ರಾಜನಾದ ಸ್ಕಂದವರ್ಮನ ಪುತ್ರಿಯಾದ ಜೇಷ್ಠದೇವಿಯನ್ನು ಸ್ವಯಂವರ ಪದ್ಧತಿಯ ಪ್ರಕಾರ ವರಿಸಿದ್ದನು. ಪರಾಕ್ರಮಿ ಅವಿನೀತನು ಗಜತುರುಗಗಳ ಮನಸ್ಸನ್ನು ಚೆನ್ನಾಗಿ ಅರಿತಿದ್ದನೆಂದೂ ಹಾಗೂ ಯುದ್ದಗಳಲ್ಲಿ ಪ್ರವೀಣನಾಗಿದ್ದನೆಂದೂ ವರ್ಣಿಸಲ್ಪಟ್ಟಿದ್ದಾನೆ. ಇವನ ನಂತರ ದುರ್ವಿನೀತನು ಅಧಿಕಾರಕ್ಕೆ ಬಂದನು. ಕೊಂಗುಣೀವರ್ಮ ಮಾಧವ ದುರ್ವಿನೀತನು ಗಂಗ ಸಂತತಿಯ ಪ್ರಸಿದ್ಧ ರಾಜರಲ್ಲಿ ಒಬ್ಬನು. ದುರ್ವಿನೀತನು ಅವಿನೀತ ಮತ್ತು ಜೇಷ್ಠಾದೇವಿಯ ಮಗನು. ಅವಿನೀತನಿಗೆ ಮತ್ತೊಬ್ಬ ರಾಣಿಯಿದ್ದು ಅವಳ ಗರ್ಭದಲ್ಲಿ ಮತ್ತೊಬ್ಬ ಪುತ್ರನು ಜನಿಸಿದನು. ಕಿರಿಯರಾಣಿಯ ಮೇಲಿನ ಮೋಹದಿಂದ ಅವಿನೀತನು ದುರ್ವಿನೀತನ ಹಕ್ಕನ್ನು ಕಡೆಗಣಿಸಿ ವಯಸ್ಸಿನಲ್ಲಿ ಕಿರಿಯವನಾದ ಕಿರಿಯ ರಾಣಿಯ ಪುತ್ರನನ್ನು ತನ್ನ ಮರಣ ಕಾಲದಲ್ಲಿ ಸಿಂಹಾಸನದ ಉತ್ತರಾಧಿಕಾರಿಯಾಗಿ ಹೆಸರಿಸಿದನು. ಆದ್ದರಿಂದ ನ್ಯಾಯವಾದ ವಾರಸುದಾರನಾದ ಜೇಷ್ಠದೇವಿಯ ಮಗನಾದ ದುರ್ವಿನೀತನು ತನ್ನ ಹಕ್ಕನ್ನು ಪ್ರತಿಪಾದಿಸಿದನು. ದುರ್ವಿನೀತ ಮತ್ತು ಅವನ ಮಲತಮ್ಮನಿಗೆ ಕಚ್ಚಾಟಗಳು ಪ್ರಾರಂಭವಾದವು. ದುರ್ವಿನೀತನು ತಮ್ಮ ಮಲ ತಮ್ಮನನ್ನು ಸೋಲಿಸಿ ರಾಜನಾದನು.

ದುರ್ವಿನೀತ ಆಳ್ವಿಕೆಯಲ್ಲಿ ಪುನ್ನಾಟ ರಾಜ್ಯವೂ ಗಂಗ ರಾಜ್ಯಕ್ಕೆ ಸೇರಿತು. ದುರ್ವಿನೀತನ ತಾಯಿ ಜೇಷ್ಠದೇವಿ ಪುನ್ನಾಟ ರಾಜ ಸ್ಕಂದವರ್ಮನ ಮಗಳು ಸ್ಕಂದವರ್ಮನ ಏಕಮಾತ್ರ ಪುತ್ರ ರವಿದತ್ತನು(ಕ್ರಿ.ಶ.550ಕ್ಕೂ ಮೊದಲೇ) ತಂದೆ ಜೀವಿಸಿರುವಾಗಲೆ ಮರಣ ಹೊಂದಿದನು. ಆದ್ದರಿಂದ ಸ್ಕಂದವರ್ಮನ ಮರಣಾನಂತರ ಅವನ ಮಗಳ ಮಗ ದುರ್ವಿನೀತನೇ ಪುನ್ನಾಟ ರಾಜ್ಯದ ಹಕ್ಕುದಾರನಾದನು. ಕಪಿಲಾ ನದಿಯ ಬಯಲಿನಲ್ಲಿದ್ದ ಸಂಪದ್ಭತರಿತ ಪುನ್ನಾಟ ರಾಜ್ಯ ಗಂಗ ರಾಜ್ಯಕ್ಕೆ ಸೇರಿದ್ದರಿಂದ ಗಂಗವಾಡಿ ಮತ್ತಷ್ಟು ವಿಸ್ತಾರವೂ ಸಂಪದ್ಭರಿತವೂ ಆಗಿ

ಪರಿಣಮಿಸಿತು. ಇದರೊಂದಿಗೆ ಪುನ್ನಾಟದ ಅರಸರ ಆಳ್ವಿಕೆ ಅಂತ್ಯಗೊಂಡರೂ ಈಗಿನ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ನಂಜನಗೂಡು, ಹುಣಸೂರು ಮುಂತಾದ ಪ್ರದೇಶಗಳನ್ನೊಳಗೊಂಡ ಆಡಳಿತದ ಘಟಕವಾಗಿದ್ದ ನಾಡಿನ ಹೆಸರು ಪುನ್ನಾಟ ಎಂದೇ ನಂತರದಲ್ಲೂ ಮುಂದುವರಿಯಿತು.

## REFERENCES :


1. ಎಪಿಗ್ರಾಫಿಯ ಕರ್ನಾಟಿಕ ಸಂ 4, ಶಾಸನ ಸಂಖ್ಯೆ ಕೊ.ಗಾ. 167
2. ಎಪಿಗ್ರಾಪಿಯ ಕರ್ನಾಟಿಕ ಸಂ 3, ಶಾಸನ ಸಂಖ್ಯೆ ಹೆ.ಕೋ. 1 ರಿಂದ 160
3. ಎಪಿಗ್ರಾಫಿಯ ಕರ್ನಾಟಿಕ ಸಂ 3, ಶಾಸನ ಸಂಖ್ಯೆ ನಂ.ಗೂ. 129,278
4. ಅದೇ ಶಾಸನ ಸಂಖ್ಯೆ ಹೆ.ಕೋ. 123
5. ಡಾ. ಅಂಬಳಿಕೆ ಹಿರಿಯಣ್ಣ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2006.
6. ಷೇಕ್ ಆಲಿ, ಜಿ.ಆರ್. ರಂಗಸ್ವಾಮಯ್ಯ, ದಕ್ಷಿಣ ಭಾರತ ಇತಿಹಾಸ, ಅಖಿಲಾ ಏಜೆನ್ಸೀಸ್, ಮೈಸೂರು, 2014.
7. ಎಪಿಗ್ರಫಿ ಕರ್ನಾಟಕ ಸಂ 4, ಶಾಸನ ಸಂಖ್ಯೆ ಕೊ.ಗಾ. 167
8. ಷೇಕ್ ಆಲಿ, ಜಿ.ಆರ್. ರಂಗಸ್ವಾಮಯ್ಯ, ದಕ್ಷಿಣ ಭಾರತ ಇತಿಹಾಸ, ಅಖಿಲಾ ಏಜೆನ್ಸೀಸ್, ಮೈಸೂರು, 2014.


### ಗ್ರಂಥಋಣ


1. ಷೇಕ್ ಆಲಿ, ಜಿ.ಆರ್. ರಂಗಸ್ವಾಮಯ್ಯ, ದಕ್ಷಿಣ ಭಾರತ ಇತಿಹಾಸ, ಅಖಿಲಾ ಏಜೆನ್ಸೀಸ್, ಮೈಸೂರು, 2014.
2. ನೀ.ಗಿರೀಗೌಡ, ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್, ಪರಿಶ್ರೀ ಮುದ್ರಣಾಲಯ ಕರ್ನಾಟಕ ಸರ್ಕಾರ, ಬೆಂಗಳೂರು, 2011.
3. ಡಾ. ಹಾ. ಮಾ. ನಾಯಕ, ಕನ್ನಡ ವಿಷಯ ವಿಶ್ವಕೋಶ, ಮೈಸೂರು, 1979.
4. ಡಾ. ಹಾ. ಮಾ. ನಾಯಕ, ಎಪಿಗ್ರಾಫಿ ಕರ್ನಾಟಕ, ಸಂ. 03, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1974.
5. ಡಾ. ಅಂಬಳಿಕೆ ಹಿರಿಯಣ್ಣ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2006.